ಸಿ.ಸಿ .ನಂ.159/2022 ಪಿಡಬ್ಲ್ಯೂಃ 1

ದಿನಾಂಕಃ 05-01-20424 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಪಿ ಎಸ್ ಎನ್ ವಕೀಲರಿಂದಃ**

5. ವಾಹನ ಸಂಖ್ಯೆ ಕೆಎ 07/8592 ಇದನ್ನು ನಮ್ಮ ಸಂಸ್ಥೆಯವರೇ ಹರಾಜು ಮಾಡಿರುತ್ತಾರೆ ಎಂದರೆ ಸರಿ . ಆ ರೀತಿ ವಾಹನವನ್ನು ನಮ್ಮ ಸಂಸ್ಥೆಯವರೇ ಹರಾಜು ಮಾಡುವ ಸಂದರ್ಭದಲ್ಲಿ ಸದರಿ ವಾಹನದ ಮೂಲ ದಾಖಲೆಗಳನ್ನು ನಾವು ಇಟ್ಟುಕೊಳ್ಳಬೇಕಾಗುತ್ತದೆ ಎಂದರೆ ಸಾಕ್ಷಿಯು ಅದರ ಅವಶ್ಯಕತೆ ಇಲ್ಲ ಎಂದು ನುಡಿಯುತ್ತಾರೆ . ವಾಹನದ ಮೂಲ ದಾಖಲೆ ಇಲ್ಲದೇ ಅದನ್ನು ಹರಾಜು ಮಾಡಲು ಆಗುವುದಿಲ್ಲ ಎಂದರೆ ಸರಿಯಲ್ಲ . ನಮ್ಮ ಸಂಸ್ಥೆಯವರು ಸದರಿ ವಾಹನವನ್ನು ಹರಾಜು ಮಾಡಿದಾಗ ಖರೀದಿದಾರರ ಹೆಸರಿಗೆ ನಾವೇ ಆರ್ ಸಿಯನ್ನು ವರ್ಗಾವಣೆ ಮಾಡಿಸಿಕೊಡಬೇಕು ಎಂದರೆ ಸರಿಯಲ್ಲ . ಸದರಿ ವಾಹನವನ್ನು ಆರೋಪಿಯು ಖರೀದಿ ಮಾಡಿದ ನಂತರ ಆರೋಪಿಯ ಹೆಸರಿಗೆ ಆರ್ ಸಿಯನ್ನು ನಾವು ವರ್ಗಾವಣೆ ಮಾಡಿ ಕೊಟ್ಟಿರುವುದಿಲ್ಲ . ಸದರಿ ವಾಹನದ ಯಾವುದೇ ಮೂಲ ದಾಖಲೆಗಳನ್ನು ನಾವು ಆರೋಪಿಗೆ ಹಸ್ತಾಂತರಿಸಿರುವುದಿಲ್ಲ ಎಂದರೆ ಸರಿ .

6. ಅದೇ ವಾಹನವನ್ನು ನಂತರ ನಾವು ಹರಾಜು ಮೂಲಕ ಬೇರೆಯವರಲ್ಲಿ ಮಾರಾಟ ಮಾಡಿರುತ್ತೇವೆ ಎಂದರೆ ಸರಿ . ಆ ರೀತಿ 2 ನೇ ಬಾರಿ ನಾವು ಹರಾಜು ಪ್ರಕ್ರಿಯೆ ಮಾಡಿದ ಸಂದರ್ಭದಲ್ಲಿ ಸದರಿ ವಾಹನದ ಆರ್ ಸಿ ಅದರ ಮೊದಲನೇ ಮಾಲೀಕರಾದ ಮಹೇಶ ಕರ್ಕಿಕರರವರ ಹೆಸರಿನಲ್ಲಿ ಇತ್ತು . 2 ನೇ ಹರಾಜಿನಲ್ಲಿ ಸದರಿ ವಾಹನ 3 ಲಕ್ಷ ರೂಪಾಯಿಗೆ ಮಾರಾಟ ಆಗಿರುತ್ತದೆ . ಸದರಿ 2 ನೇ ಬಾರಿ ಆದ ಹರಾಜಿನ ಪ್ರಕ್ರಿಯೆಯ ಬಗ್ಗೆ ನಾವು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಆ ಬಗ್ಗೆ ಸಾಲದ ಖಾತೆಯ ಉತಾರದಲ್ಲಿ ನಮೂದು ಇದೆ ಎಂದು ನುಡಿಯುತ್ತಾರೆ . ಸದರಿ 2 ನೇ ಬಾರಿ

ಮಾಡಿರುವ ಹರಾಜು ಪ್ರಕ್ರಿಯೆಯ ದಾಖಲೆಗಳನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರು ಪಡಿಸಲು ನಮಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ .

7. ಆರೋಪಿಯು ನಮ್ಮ ಸಂಸ್ಥೆಗೆ ವಾಹನ ಹರಾಜಿನ ಪ್ರಕ್ರಿಯೆಗೆ ಸಂಬಂಧಪಟ್ಟಂತೆ ಅರ್ಜಿಯನ್ನು ಸಲ್ಲಿಸಿದ್ದನ್ನು ಬಿಟ್ಟರೆ ಬೇರೆ ಯಾವುದೇ ಅರ್ಜಿಯನ್ನು ಸಲ್ಲಿಸಿಲ್ಲ ಎಂದರೆ ಸರಿ . ನಾನು ಹೇಳಿದ ಉದಯ ಟೂರಿಸ್ಟನಲ್ಲಿ ಎಷ್ಟು ಜನ ಪಾಲುದಾರರು ಇದ್ದರು ಎಂದು ನನಗೆ ಗೊತ್ತಿಲ್ಲ . ಒಂದು ಸಂಸ್ಥೆಯ ನಿರ್ವಹಣೆಯ ಕುರಿತಾಗಿ ಸಾಲವನ್ನು ಕೇಳಿದಾಗ ಸದರಿ ಸಂಸ್ಥೆಯಲ್ಲಿ ಎಷ್ಟು ಜನ ಪಾಲುದಾರರು ಇದ್ದಾರೆ ಎಂದು ತಿಳಿದುಕೊಳ್ಳುವುದು ನಮ್ಮ ಜವಾಬ್ದಾರಿಯಾಗಿರುತ್ತದೆ ಎಂದರೆ ಸಾಕ್ಷಿಯು ಇದು ವೈಯಕ್ತಿಕ ಉದ್ದೇಶದ ಸಾಲ ಎಂದು ನುಡಿಯುತ್ತಾರೆ . ಸದರಿ ಉದಯ ಟೂರಿಸ್ಟ ಸಂಸ್ಥೆಯಲ್ಲಿರುವ ವ್ಯಕ್ತಿಗಳನ್ನು ಈ ಪ್ರಕರಣದಲ್ಲಿ ಜಾಮೀನುದಾರರಾಗಿ ಹಾಗೂ ಸಾಕ್ಷಿದಾರರಾಗಿ ತೆಗೆದುಕೊಂಡಿರುವುದಿಲ್ಲ .

8. ಮೇಲೆ ಹೇಳಿದಂತೆ ಮೊದಲನೇ ಹರಾಜು ಪ್ರಕ್ರಿಯೆ ಆದ ಸುಮಾರು ಎರಡು ವರ್ಷಗಳ ನಂತರ 2 ನೇ ಹರಾಜು ಪ್ರಕ್ರಿಯೆ ನಡೆದಿರುತ್ತದೆ . 2 ನೇ ಹರಾಜಿನಲ್ಲಿ ಸದರಿ ವಾಹನವನ್ನು ಯಾರಿಗೆ ಮಾರಾಟ ಮಾಡಲಾಗಿದೆ ಎಂದು ನನಗೆ ನೆನಪಿಲ್ಲ. 2 ನೇ ಹರಾಜಿನ ಪ್ರಕ್ರಿಯೆ ಸಂಬಂಧದಲ್ಲಿ ಆರೋಪಿಯಿಂದ ಸದರಿ ವಾಹನದ ಯಾವುದೇ ಮೂಲ ದಾಖಲೆಗಳನ್ನು ನಾವು ಪಡೆದುಕೊಂಡಿಲ್ಲ . ಅದೇ ರೀತಿ ಮೊದಲನೇ ಹರಾಜು ಪ್ರಕ್ರಿಯೆಯಲ್ಲಿಯೂ ಸಹ ಸದರಿ ವಾಹನದ ಮೂಲ ಮಾಲೀಕರಿಂದ ನಾವು ಯಾವುದೇ ಮೂಲ ದಾಖಲೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿ . ನಮ್ಮ ಸಂಸ್ಥೆಯಲ್ಲಿ ವಾಹನದ ಹರಾಜು ನಮ್ಮ ಆಡಳಿತ ಮಂಡಳಿಯ ನೇತೃತ್ವದಲ್ಲಿ ನಡೆಯುತ್ತದೆ . ಆಡಳಿತ ಮಂಡಳಿಯ ನೇತೃತ್ವದಲ್ಲಿ ವಾಹನ ಹರಾಜು ಆಗಿರುವುದರಿಂದ ಪ್ರತ್ಯೇಕವಾಗಿ ಸಾಲ ಮಂಜೂರಾತಿ ಪ್ರಕ್ರಿಯೆ ಆಗುವುದಿಲ್ಲ ಎಂದರೆ ಸಾಕ್ಷಿಯು ಹರಾಜು ಪ್ರಕ್ರಿಯೆ ಹಾಗೂ ಸಾಲ ಮಂಜೂರಾತಿ ಪ್ರಕ್ರಿಯೆ ಬೇರೆ ಬೇರೆ ಎಂದು ನುಡಿಯುತ್ತಾರೆ . ಹರಾಜು ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವವರ ಇಎಮ್ ಡಿ ಯನ್ನು ನಾವು ಪಡೆದುಕೊಳ್ಳುತ್ತೇವೆ . ಆ ಸಂದರ್ಭದಲ್ಲಿ

ಪಿಡಬ್ಲೂಃ 1

ಯಾವುದೇ ಸಾಲದ ಅರ್ಜಿಯ ಅವಶ್ಯಕತೆ ಇರುವುದಿಲ್ಲ . ಯಾವುದೇ ವಾಹನವನ್ನು ಹರಾಜು ಪ್ರಕ್ರಿಯೆಯಲ್ಲಿ ಮಾರಾಟ ಮಾಡಿದಾಗ ಸದರಿ ವಾಹನದ ವರ್ಗಾವಣೆ ನಮ್ಮ ಜವಾಬ್ದಾರಿಯಾಗಿರುತ್ತದೆ ಎಂದರೆ ಸರಿಯಲ್ಲ. ಆ ರೀತಿ ಹರಾಜು ಪ್ರಕ್ರಿಯೆ ಮಾಡಿದಾಗ ಆರೋಪಿಗೆ ವಾಹನದ ದಾಖಲೆಗಳು ಲಭ್ಯವಿಲ್ಲದ ಕಾರಣ ಆರೋಪಿಗೆ ಸದರಿ ವಾಹನದ ಕಬ್ಜಾವನ್ನು ಪಡೆದುಕೊಳ್ಳಲು ಸಾಧ್ಯವಾಗಿಲ್ಲ ಎಂದರೆ ಸರಿಯಲ್ಲ.

9. ಸದರಿ ವಾಹನ ಟೂರಿಸ್ಟ ವಾಹನ ಆಗಿರುತ್ತದೆ . ಟೂರಿಸ್ಟ ವಾಹನವನ್ನು ಓಡಿಸುವಾಗ ಮೂಲ ದಾಖಲೆಗಳು ಅವಶ್ಯಕತೆ ಇರುತ್ತದೆ ಎಂದರೆ ಸರಿ . ಸದರಿ ವಾಹನದ ಕಬ್ಜಾವನ್ನು ಆರೋಪಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸದರಿ ವಾಹನದ ಕಬ್ಜಾವನ್ನು ಆರೋಪಿಗೆ ಕೊಡದೇ ನಮ್ಮ ಕಚೇರಿಯಲ್ಲಿಯೇ ಅದನ್ನು ಇಟ್ಟುಕೊಂಡು ನಾವು ಇನ್ನೊಬ್ಬರಿಗೆ ಅದನ್ನು ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು. )

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.